ಇಂದು ದಿನಾಂಕ: 05-01-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟಿ ಸವಾಲು: ಪ್ರತಿವಾದಿಯರ ಪರ ಶ್ರೀ ಎಸ್.ಎಲ್. ವಕೀಲರಿಂದ :-</u>

ನಾನು 2005 ರಲ್ಲಿ ಇಂಜಿನಿಯರಿಂಗ್ ಪದವಿ ಮುಗಿಸಿದ್ದೇನೆ ಮತ್ತು 2011 ರಲ್ಲಿ ಎಂ.ಬಿ.ಎ. ಪದವಿ ಮುಗಿಸಿದ್ದೇನೆ. 2005 ರಿಂದ ನಾನು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರುವುದರಿಂದ ಬೆಂಗಳೂರಿನಲ್ಲಿ ಮತ್ತು ಸಿರವಾರದಲ್ಲಿ ಎರಡು ಕಡೆ ವಾಸ ಮಾಡುತ್ತಿದ್ದೇನೆ. ನನ್ನ ಮದುವೆ 2013 ರಲ್ಲಿ ಆಗಿದೆ. ನನ್ನ ಮದುವೆಯ ಸಮಯದಲ್ಲಿ ತಂದೆ ತಾಯಿ ಇರಲಿಲ್ಲ ಎಂದರೆ ಸರಿ. 2006 ರಲ್ಲಿ ನಮ್ಮ ತಂದೆ ತೀರಿಕೊಂಡಿದ್ದಾರೆ ಎಂದರೆ ಸರಿ. 1991 ರಲ್ಲಿ ನಮ್ಮ ತಾಯಿ ತೀರಿಕೊಂಡಿದ್ದಾರೆ ಎಂದರೆ ಸರಿ. ನನ್ನ ಮದುವೆಯ ಎಲ್ಲಾ ಕಾರ್ಯಕ್ರಮಗಳನ್ನು1 ನೇ ಪ್ರತಿವಾದಿ ನೆರವೇರಿಸಿದ್ದಾರೆ ಎಂದರೆ ಸುಳ್ಳು. ನನ್ನ ಮದುವೆಯ ಸಮಯದಲ್ಲಿ 1 ನೇ ಪ್ರತಿವಾದಿ 5 ಲಕ್ಷ ಸಾಲ ತಂದು ಖರ್ಚು ಮಾಡಿದ್ದಾರೆ ಎಂದರೆ ಸುಳ್ಳು ತಂದೆ ತಾಯಿಂದ ಬಂದ 7 ತೊಲೆ ಬಂಗಾರ ಇದೆ ಅದು 1 ನೇ ಪ್ರತಿವಾದಿಯ ಹತ್ತಿರ ಇದೆ. ನನ್ನ ಮದುವೆಯ ಸಮಯದಲ್ಲಿ 1 ನೇ ಪ್ರತಿವಾದಿ 13 ತೊಲೆ ಮತ್ತು 7 ತೊಲೆ ಬಂಗಾರವನ್ನು ನನ್ನ ಹೆಂಡತಿಗೆ ಕೊಟ್ಟಿದ್ದಾರೆ ಎಂದರೆ ಸುಳ್ಳು. ಸದರಿ 13 ಮತ್ತು 7 ತೊಲೆ ಬಂಗಾರ ನನ್ನ ಬಳಿ ಇದೆ ಎಂದರೆ ಸುಳ್ಳು. ಸದರಿ 7 ತೊಲೆ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿದಾರರು ಆ ಬಂಗಾರ 1 ನೇ ಪ್ರತಿವಾದಿಯ ಹತ್ತಿರ ಇದೆ ಎನ್ನುತ್ತಾರೆ. ಸದರಿ 13 ತೊಲೆ ಬಂಗಾರ 1 ನೇ ಪ್ರತಿವಾದಿಯ ಹೆಂಡತಿಗೆ ಸೇರಿರುವುದರಿಂದ ಅದನ್ನು ಅವರಿಗೆ ಕೊಡಬೇಕಾಗಿರುವುದನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಬೆಂಗಳೂರಿನಲ್ಲಿ ವಾಸ ಮಾಡುತ್ತೇನೆ, ಸಿರವಾರಕ್ಕೆ ಯಾವತ್ತು ಬಂದಿಲ್ಲ ಎಂದರೆ ಸರಿಯಲ್ಲ. ದಾವಾ ಸರ್ವೆ ನಂ.59 ರಲ್ಲಿರುವ 9 ಎಕರೆ 1 ಗುಂಟೆ ಜಮೀನು 2018 ರವರೆಗೆ ಖುಷ್ಕಿ ಜಮೀನು ಇತ್ತು ಎಂದರೆ ಸರಿಯಲ್ಲ, 2012 ರಿಂದ ಅದು ನೀರಾವರಿ ಜಮೀನು ಇದೆ. 2012 ರಿಂದ ಆ ಜಮೀನು ನೀರಾವರಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2017-18 ರ ವರೆಗಿನ ಪಹಣಿ ಪತ್ರಿಕೆಗಳಲ್ಲಿ ಜೋಳದ ಬೆಳೆ ಮಾತ್ರ ನಮೂದಾಗಿದೆ ಎಂದರೆ ಸರಿ . ಸರ್ವೆ ನಂ.59 ರಲ್ಲಿರುವ ಜಮೀನು ಮೊದಲು 1 ನೇ ಪ್ರತಿವಾದಿ 5 ಲಕ್ಷ ಖರ್ಚು ಮಾಡಿ ಡೆವಲಪ್ ಮಾಡಿದ್ದಾರೆ ಎಂದರೆ ಸರಿಯಲ್ಲ ನಾವೆಲ್ಲರೂ ಕೂಡಿ ಡೆವಲಪ್ ಮಾಡಿದ್ದೇವೆ. ನಾನು ಮತ್ತು 2 ನೇ ಪ್ರತಿವಾದಿ ಸದರಿ ಜಮೀನು ಡೆವಲಪ್ ಮಾಡಿದಾಗ ಉದ್ಯೋಗ ಮಾಡುತ್ತಿರಲಿಲ್ಲ ಆದ್ದರಿಂದ 1 ನೇ ಪ್ರತಿವಾದಿ ಮಾತ್ರ 5 ಲಕ್ಷ ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.146 ರಲ್ಲಿರುವ ಜಮೀನು ಡೆವಲಪ್ ಮಾಡಲು 1 ನೇ ಪ್ರತಿವಾದಿ ಸಾಕಷ್ಟು ಹಣ ಖರ್ಚು ಮಾಡಿದ್ದಾನೆ ಎಂದರೆ ಸುಳ್ಳು. ಸಿರವಾರ ಪಟ್ಟಣದ ಮುಖ್ಯ ರಸ್ತೆ ಅಗಲೀಕರಣ ಆದಾಗ ನಮ್ಮ ಕುಟುಂಬದ ಮಳಿಗೆಗಳನ್ನು ಭಾಗಶ: ಡೆಮೊಲಿಷ್ ಮಾಡಿ ರಿಕನ್ಸ್ಟ್ರಕ್ಷನ್ ಮಾಡಲಾಗಿದೆ ಎಂದರೆ ಸರಿಯಲ್ಲ. ಮಳಿಗೆಗಳ ದುರಸ್ತಿಗೆ 1 ನೇ ಪ್ರತಿವಾದಿ 15 ಲಕ್ಷ ಹಣ ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಬಿ 5 ನೇ ಮನೆ ನಮ್ಮ ತಾಯಿಗೆ ಅಲಾಟ್ ಆಗಿರುತ್ತದೆ. ನಮ್ಮ ತಾಯಿಯ ಹೆಸರಿನಲ್ಲಿ ಆ ಮನೆ ಅಲಾಟ್ ಆಗುವುದಕ್ಕೆ ನಮ್ಮ ತಂದೆ ಹಣ ಕಟ್ಟಿದ್ದಾರೆ ಎಂದರೆ ಸರಿ. 1992-93 ರಲ್ಲಿ ಆ ಮನೆ ನಮ್ಮ ತಾಯಿಗೆ ಅಲಾಟ್ ಆಗಿರುತ್ತದೆ ಆಗ ನಾನು, ನನ್ನ ಅಣ್ಣತಮ್ಮಂದಿರು ವಿದ್ಯಾಭ್ಯಾಸ ಮಾಡುತ್ತಿದ್ದೆವು. ನಮ್ಮ ತಾಯಿಯ ಹೆಸರಿನಲ್ಲಿ ಬಳ್ಳಾರಿಯ ಮನೆ ಅಲಾಟ್ ಆದ ಮೇಲೆ ಅದರ ಪ್ರೀಮಿಯಮ್ ಹಣ ಕಟ್ಟಿಲ್ಲ ಆ ಹಣವನ್ನು 1 ನೇ ಪ್ರತಿವಾದಿ ತನ್ನ ಸಂಪಾದನೆಯಿಂದ ಕಟ್ಟಿದ್ದಾರೆ

ಎಂದರೆ ಸರಿಯಲ್ಲ, ಸಾಕ್ಷಿದಾರರು ಮುಂದುವರೆದು 1 ನೇ ಪ್ರತಿವಾದಿ ಯಾವುದೇ ಕೆಲಸ ಮಾಡುವುದಿಲ್ಲ ಎನ್ನುತ್ತಾರೆ. 1 ನೇ ಪ್ರತಿವಾದಿ ಬಿ.ಇ. ಪದವಿ ಓದಿದ್ದಾರೆ. 1 ನೇ ಪ್ರತಿವಾದಿ ಚನ್ನಯ್ ಮತ್ತು ಬೆಂಗಳೂರಿನಲ್ಲಿ ಪದವಿ ಮುಗಿದ ಮೇಲೆ ಕೆಲಸ ಮಾಡಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 2 ನೇ ಪ್ರತಿವಾದಿಯ ವಿದ್ಯಾಬ್ಯಾಸದ ಖರ್ಚಿಗೆ 25 ಲಕ್ಷ ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಸ್ವಯಾರ್ಜಿತ ಹಣದಿಂದ ಈ ಎಲ್ಲಾ ಖರ್ಚು ವೆಚ್ಚಗಳನ್ನು ಮಾಡಿದ್ದಾರೆ ಎಂದರೆ ಸರಿಯಲ್ಲ. ಬಳ್ಳಾರಿಯ ಮನೆಯ ಕಂತುಗಳನ್ನು ಮತ್ತು ಇತರೆ ತೆರಿಗೆಗಳನ್ನು ಮತ್ತು ನೊಂದಣಿ ಶುಲ್ಕವನ್ನು 1 ನೇ ಪ್ರತಿವಾದಿಯ ಸ್ವಂತ ಹಣದಿಂದ ಕಟ್ಟಿದ್ದಾರೆ ಎಂದರೆ ಸುಳ್ಳು. ಬಳ್ಳಾರಿಯ ಮನೆಯ ಪ್ರೀಮಿಯಮ್ ಮತ್ತು ಇತರೆ ಖರ್ಚುಗಳನ್ನು 1 ನೇ ಪ್ರತಿವಾದಿ ಮಾಡಿರುವುದರಿಂದ ಅದು ಅವರ ಸ್ವಯಾರ್ಜಿತ ಆಸ್ತಿ ಇದೆ ಎಂದರೆ ಸರಿಯಲ್ಲ.

ನಮ್ಮ ತಾಯಿಗೆ ಕ್ಯಾನ್ಸರ್ ಆಗಿತ್ತು ಎಂದರೆ ಸುಳ್ಳು. ನಮ್ಮ ತಾಯಿಗೆ ಕ್ಯಾನ್ಸರ್ ಖಾಯಿಲೆ ಆದಾಗ ನಮ್ಮ ತಂದೆ ಮಾಡಿದ ಸಾಲವನ್ನು 1 ನೇ ಪ್ರತಿವಾದಿ ಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿದಾರರು ಮುಂದುವರೆದು ನಮ್ಮ ತಾಯಿ 1999 ರಲ್ಲಿ ತೀರಿಕೊಂಡಿದ್ದಾರೆ ಆಗ 1 ನೇ ಪ್ರತಿವಾದಿ ಹೈಸ್ಕೂಲ್ ಓದುತ್ತಿದ್ದ ನಮ್ಮ ತಂದೆ ಯಾರ ಬಳಿಯು ಸಾಲ ಮಾಡಿಲ್ಲ ನಮಗೆ ಸಾಕಷ್ಟು ಆಸ್ತಿ ಬಿಟ್ಟುಹೋಗಿದ್ದಾರೆ. ಷೆಡ್ಯೂಲ್ -ಎ ದಲ್ಲಿರುವ ಎಲ್ಲಾ ಆಸ್ತಿಗಳು ಮತ್ತು ಷೆಡ್ಯೂಲ್ -ಬಿ ದಲ್ಲಿರುವ 1 ರಿಂದ 4 ನೇ ಆಸ್ತಿಗಳು ನನ್ನ ಮತ್ತು ಪ್ರತಿವಾದಿಯರ ಹೆಸರಿನಲ್ಲಿ ಜಂಟಿಯಾಗಿವೆ ಎಂದರೆ ಸರಿ. ಷೆಡ್ಯೂಲ್ -ಬಿ ದಲ್ಲಿರುವ 5 ನೇ ಆಸ್ತಿ 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ಅದು ಅವರ ಹೆಸರಿನಲ್ಲಿ ಉಳಿದುಕೊಂಡಿದೆ ಎಂದರೆ ಸುಳ್ಳು ಸಾಕ್ಷಿದಾರರು ಮುಂದುವರೆದು 1 ನೇ ಪ್ರತಿವಾದಿ

ದೊಡ್ಡವನಾಗಿರುವುದರಿಂದ ಅವನ ಹೆಸರಿನಲ್ಲಿದೆ ಆದರೆ ಅದರಲ್ಲಿ ಎಲ್ಲರಿಗೂ ಪಾಲು ಇದೆ ಎನ್ನುತ್ತಾರೆ. 1 ನೇ ಪ್ರತಿವಾದಿ ನಮ್ಮ ಮನೆಯ ಎಲ್ಲಾ ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದಾನೆ ಎಂದರೆ ನಾವೆಲ್ಲರೂ ಕೂಡಿ ನೋಡಿಕೊಳ್ಳುತ್ತಿದ್ದೇವೆ. 7 ತೊಲೆ ಕುಟುಂಬ ಮೂಲದಿಂದ ಬಂದ ಬಂಗಾರ ಈ ದಾವೆಯಲ್ಲಿ ಉದ್ದೇಶಪೂರ್ವಕವಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ.

ದಾವೆ ಸಲ್ಲಿಸಲು ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತಾನು ಮಾಡಿದ ಎಲ್ಲಾ ಖರ್ಚುಗಳಲ್ಲಿ ನಾವು ಭಾಗ ತೆಗೆದುಕೊಂಡರೆ ಪಾಲು ಮಾಡಿಕೊಡುತ್ತೇನೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಬಳ್ಳಾರಿಯ ಮನೆಗೆ ಖರ್ಚು ಮಾಡಿರುವುದರಲ್ಲಿ ನಮ್ಮ ಪಾಲಿನ ಹಣವನ್ನು ನಾವು ಕೊಟ್ಟರೆ ಅದರಲ್ಲಿಯೂ ಪಾಲು ಕೊಡುತ್ತೇನೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಇವತ್ತಿಗೂ ದಾವಾ ಆಸ್ತಿಗಳ ಅಭಿವೃದ್ದಿಗೆ ಮಾಡಿದ 20 ಲಕ್ಷಕ್ಕೂ ಹೆಚ್ಚಿನ ಸಾಲ ಇದೆ ಎಂದರೆ ಸರಿಯಲ್ಲ. ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು-ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾನವಿ.